ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ಮತ್ತು ವಿಜ್ಞಾನಗಳ ಸಂಸ್ಥೆ, ಹಾಸನ.
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN
Website: www.hims-hassan.org Phone/Fax No.08172-231699, 231599, Email:directorhims@yahoo.com

# 3ನೇ ವಾರ್ಷಿಕ ಸಾಮಾನ್ಯ ಸಭೆಯ ಸಭಾ ನಡವಳಿಗಳು
## ದಿನಾಂಕ:31-08-2017ನೇ ಗುರುವಾರ

:ಸ್ಥಳ:
ಕೊಠಡಿ ಸಂಖ್ಯೆ: 301, 3ನೇ ಮಹಡಿ,
ವಿಧಾನ ಸೌಧ, ಬೆಂಗಳೂರು

ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

# HASSAN INSTITUTE OF MEDICAL SCIENCES, HASSAN

**(An Autonomous Institute under the Dept of Medical Education, Government of Karnataka)**

**SRI CHAMARAJENDRA HOSPITAL CAMPUS, HASSAN-573201**

Website: www.hims-hassan.org Phone/Fax No.08172-231699 Email:directorhims@yahoo.com

## 3ನೇ ವಾರ್ಷಿಕ ಸಾಮಾನ್ಯ ಸಭೆಯ ಸಭಾ ನಡವಳಿಗಳು

ದಿನಾಂಕ:31–08–2017 ಗುರುವಾರ, ಮಧ್ಯಾಹ್ನ:.3.00ಗಂಟೆಗೆ ಕೊಠಡಿ ಸಂಖ್ಯೆ:301, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು ಇಲ್ಲಿ ಸನ್ಮಾನ್ಯ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ವಾರ್ಷಿಕ ಸಾಮಾನ್ಯ ಸಭೆ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರ ಘನ ಅಧ್ಯಕ್ಷತೆಯಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 3ನೇ ವಾರ್ಷಿಕ ಸಾಮಾನ್ಯ ಸಭೆ (Annual General Meeting) ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ: 8** **ಹಾಜರಿದ್ದ ಸದಸ್ಯರ ಸಂಖ್ಯೆ:04**

| | | | |
|---|---|---|---|
| 01 | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು,<br>ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ | ಅಧ್ಯಕ್ಷರು | ಹಾಜರಿರುತ್ತಾರೆ |
| 02 | ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ,<br>ಬಹುಮಹಡಿಗಳ ಕಟ್ಟಡ , ಅಂಬೇಡ್ಕರ್ ವಿಧಿ, 6ನೇ ಮಹಡಿ, 4ನೇ ಗೇಟ್, ಬೆಂಗಳೂರು. | ಉಪಾಧ್ಯಕ್ಷರು | ಹಾಜರಿರುತ್ತಾರೆ |
| 03 | ಮಾನ್ಯ ಉಪಕುಲಪತಿಗಳು,<br>ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ,<br>ಕರ್ನಾಟಕ, ಜಯನಗರ, ಬೆಂಗಳೂರು. | ಸದಸ್ಯರು | -- |
| 04 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | -- |
| 05 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸ ಸೌಧ,<br>ಬೆಂಗಳೂರು. | ಸದಸ್ಯರು | -- |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | | |
|---|---|---|---|
| 06 | ಮಾನ್ಯ ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,<br>ಕರ್ನಾಟಕ ಸರ್ಕಾರ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 07 | ಮಾನ್ಯ ಜಿಲ್ಲಾಧಿಕಾರಿಗಳು,<br>ಹಾಸನ ಜಿಲ್ಲೆ, ಹಾಸನ. | ಸದಸ್ಯರು | -- |
| 08 | ಮಾನ್ಯ ನಿರ್ದೇಶಕರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 01 | ದಿನಾಂಕ:10-06-2015 ರಂದು ನಡೆದ 2ನೇ ವಾರ್ಷಿಕ ಸಾಮಾನ್ಯ ಸಭೆಯ ಸಭಾ ನಡವಳಿಗಳ ಅನುಪಾಲನಾ ವರದಿಯನ್ನು ಓದಿ ಅನುಮೋದಿಸುವ ಬಗ್ಗೆ. | ದಿನಾಂಕ:10-06-2015 ರಂದು ನಡೆದ 2ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ತೀರ್ಮಾನಗಳ ಅನುಪಾಲನಾ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. ಸದರಿ ಸಭೆಯ ಅನುಪಾಲನಾ ವರದಿಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 02 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2015-16ನೇ ಸಾಲಿನ ಅಡಿಟ್ ವರದಿಯನ್ನು ಶ್ರೀ. ಹೆಚ್.ಡಿ. ಅಭಿನಂದನ್, ಚಾರ್ಟರ್ಡ್ ಅಕೌಂಟೆಟ್, ಹಾಸನ ಇವರು ಸಲ್ಲಿಸಿದ್ದು ಸದರಿ ಅಡಿಟ್ ವರದಿಯನ್ನು ಅನುಮೋದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆ, ಕಾಲೇಜು ವಿಭಾಗ, ವಿಶ್ವವಿದ್ಯಾಲಯ ವಿಭಾಗ, ಪ್ಯಾರಮೆಡಿಕಲ್ ವಿಭಾಗ, ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹಾಸನ ಮತ್ತು ಹೊಳೆನರಸೀಪುರ ಇವುಗಳ 2015-16ನೇ ಸಾಲಿನ ಲೆಕ್ಕಪತ್ರಗಳನ್ನು ಸಂಸ್ಥೆಯಿಂದ ನಿಯೋಜಿತ ಗೊಂಡಿರುವ ಶ್ರೀ.ಹೆಚ್.ಡಿ.ಅಭಿನಂದನ್, ಚಾರ್ಟರ್ಡ್ ಅಕೌಂಟೆಂಟ್, ಹಾಸನರವರು ಲೆಕ್ಕಪರಿಶೋಧನೆ ನಡೆಸಿ ವರದಿಯನ್ನು ನೀಡಿರುವುದನ್ನು ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಸದರಿ ಅಡಿಟ್ ವರದಿಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.<br>ಮಹಾಲೇಖಪಾಲಕರು, ಕರ್ನಾಟಕ ವೃತ್ತ, ಬೆಂಗಳೂರು ಮತ್ತು ಸಂಸ್ಥೆಯ ಅಂತರೀಕ ಲೆಕ್ಕ-ಪರಿಶೋಧಕರುಗಳು ಅಡಿಟ್ ವರದಿಗಳಲ್ಲಿ ಸಂಸ್ಥೆಯಲ್ಲಿನ ದೈನಂದಿನ ರಿಜಿಸ್ಟರ್‌ಗಳನ್ನು ಸರಿಯಾಗಿ ನಿರ್ವಹಣೆ ಮಾಡದಿರುವ ಬಗ್ಗೆ ಹಾಗೂ ಯೂಸರ್ಸ್ ನಿಧಿಗೆ ಸಂಬಂಧಪಟ್ಟ ದಾಖಲೆಗಳನ್ನು ಅಡಿಟ್‌ಗೆ ಒದಗಿಸದಿರುವುದರ ಬಗ್ಗೆ ಅಡಿಟ್ ವರದಿಯಲ್ಲಿ ಸೂಚಿತವಾಗಿರುವ ಅಂಶಗಳ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸುವ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕರು, ಮಹಾಲೇಖಪಾಲಕರ ಅಡಿಟ್ ವರದಿಯಲ್ಲಿಯೂ ಕೂಡ ಯೂಸರ್ಸ್ ನಿಧಿಗೆ ಸಂಬಂಧಿಸಿದ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ದಾಖಲೆಗಳನ್ನು ಅಡಿಟ್ ಸಮಯದಲ್ಲಿ ಒದಗಿಸದಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಲಾಗಿತ್ತು. ಆಗ ಸಂಬಂಧಪಟ್ಟ ವಿಷಯ ನಿರ್ವಾಹಕರ ಗೈರುಹಾಜರಿಯ ಕಾರಣ ಕೊಟ್ಟಿದ್ದ ಅಧಿಕಾರಿಗಳು ತದನಂತರ ಈ ನಿಟ್ಟಿನಲ್ಲಿ 3 ಸಲ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ ಈ ಬಗ್ಗೆ ಕ್ರಮ ವಹಿಸುವಂತೆ ಆದೇಶಿಸಿದರೂ ಸಹ ಸಂಬಂಧಪಟ್ಟ ಅಧಿಕಾರಿಗಳು ನಿಯಮಾನುಸಾರ ಕ್ರಮವಹಿಸದೇ ನಿರ್ಲಕ್ಷ ಧೋರಣೆ ಅನುಸರಿಸುತ್ತಾ ಬಂದಿರುತ್ತಾರೆ. ಅಧಿಕಾರಿಗಳ ಈ ನಡವಳಿಕೆಯಿಂದ ಯೂಸರ್ಸ್ ನಿಧಿ ವಿಚಾರದಲ್ಲಿ ಆರೋಗ್ಯ ರಕ್ಷಾ ಸಮಿತಿಯ ಅಧ್ಯಕ್ಷರಾದ ನಿರ್ದೇಶಕರೇ ಎಲ್ಲಾ ಆಗು-ಹೋಗುಗಳಿಗೆ ನೇರ ಹೊಣೆಗಾರರಾಗಿರುವುದರಿಂದಾಗಿ ಕಾರ್ಯ ನಿರ್ವಹಿಸಲು ಸಮಸ್ಯೆಯಾಗಿರುವ ಬಗ್ಗೆ ಸಂಸ್ಥೆಯ ನಿರ್ದೇಶಕರು ತಮ್ಮ ಅಹವಾಲು ಹೇಳಿ ಕೊಂಡರು.<br>ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಆಡಳಿತ ಮಂಡಳಿಯು ಕೂಡಲೇ ಯೂಸರ್ಸ್ ನಿಧಿಗೆ ಸಂಬಂಧಪಟ್ಟ ದಾಖಲೆಗಳನ್ನು ಲೆಕ್ಕ-ಪತ್ರ ಪರಿಶೋಧನೆಗೆ ಒದಗಿಸುವಂತೆ ಸಭೆಯಲ್ಲಿ ಹಾಜರಿದ್ದ ಹಿಮ್ಸ್‌ನ ಸಂಬಂಧಿತ ಅಧಿಕಾರಿಗಳಿಗೆ ಆದೇಶ ನೀಡಿ, ಈಗಲೂ ತಪ್ಪಿದಲ್ಲಿ ಶ್ರೀ.ದೇವಯ್ಯ, ಸಹಾಯಕ ಆಡಳಿತಾಧಿಕಾರಿಗಳು ಹಾಗೂ ಹಾಲಿ ಪ್ರಭಾರ ಆರ್ಥಿಕ ಅಧಿಕಾರಿಗಳು,. ಡಾ. ಕೆ. ಶಂಕರ್, ವೈದ್ಯಕೀಯ ಅಧೀಕ್ಷಕರು ಮತ್ತು ಹಿಂದಿನ ಪ್ರಭಾರ ಆರ್ಥಿಕ ಅಧಿಕಾರಿಗಳಾಗಿದ್ದ ಶ್ರೀ.ಟಿ.ವಿ ನಟರಾಜ್ ಈ ಮೂವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.. |

(ಡಾ.ಬಿ.ಸಿ. ರವಿಕುಮಾರ್),
ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿ, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

**ನಿರ್ದೇಶಕರು**
**ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ**
**ಹಾಸನ**

(ವಿ.ಮಂಜುಳ) ಭಾಆಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ
ಹಾಗೂ ಉಪಾಧ್ಯಕ್ಷರು,
ಆಡಳಿತ ಮಂಡಳಿ, ಹಿಮ್ಸ್, ಹಾಸನ.

(ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್)
ವೈದ್ಯಕೀಯ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.